
■ ಹನಿ

## ಖೋಸ್ಲಾ ಶ್ರೀಮಂತಿಕೆ

ಕಡಿಮೆ ಅವಧಿಯಲ್ಲಿ ಹೆಚ್ಚು ದುಡ್ಡು ಮಾಡಬಹುದಾದ ಕ್ಷೇತ್ರ ಮಾಹಿತಿ ತಂತ್ರಜ್ಞಾನದ್ದು. ಐಟಿ ಕ್ಷೇತ್ರದಲ್ಲಿ ಯಾವ ಸಾಫ್ಟ್‌ವೇರ್‌ಗೆ ಹೆಚ್ಚು ಬೇಡಿಕೆ ಬರಲಿದೆ.. ಎಲ್ಲಿ ಹಣ ಹೂಡಿದರೆ ವರ್ಷದಲ್ಲೇ 2-3 ಪಟ್ಟು ಹೆಚ್ಚು ಆದಾಯ ಗಳಿಸಬಹುದು... ಎನ್ನುವ ಲೆಕ್ಕಾಚಾರ ಅಷ್ಟು ಸುಲಭದ್ದಲ್ಲ. ಆದರೆ ಭಾರತೀಯ ಸಂಜಾತ ಅಮೆರಿಕನ್ ಹೂಡಿಕೆದಾರ ವಿನೋದ್ ಖೋಸ್ಲಾಗೆ ಇದು ಕರತಲಾಮಲಕ ವಿದ್ಯೆ. ಆತ ಎಲ್ಲಿ ದುಡ್ಡು ಹಾಕಿದರೂ ಅದು ಅತ್ಯಂತ ವೇಗವಾಗಿ ದುಪ್ಪಟ್ಟಾಗುತ್ತಿದೆ. ಹಾಗೆಂದೇ ಅಮೆರಿಕದ ಅತ್ಯಂತ ಯಶಸ್ವಿ ವೆಂಚರ್ ಕ್ಯಾಪಿಟಲಿಸ್ಟ್ ಎಂಬ ಖ್ಯಾತಿ ಈತನದ್ದು. ಇದೀಗ 'ಫೋರ್ಬ್ಸ್' ಪ್ರಕಟಿಸಿರುವ ಅಮೆರಿಕದ ಭಾರೀ ಶ್ರೀಮಂತರ ಪಟ್ಟಿಯಲ್ಲಿ ಐವರು ಭಾರತೀಯರ ಹೆಸರುಗಳೂ ಇವೆ. ವಿನೋದ್ ಖೋಸ್ಲಾ ಅವರಲ್ಲಿ ಮೂರನೆಯವರು. ಈ ವರ್ಷದ ಅವರ ಆದಾಯ 1.4 ಶತಕೋಟಿ ಡಾಲರ್. ಬಿಲ್ ಗೇಟ್ಸ್ ಮತ್ತು ವಾರನ್ ಬಫೆಟ್ಸ್ ಮೊದಲ ಎರಡು ಸ್ಥಾನಗಳನ್ನು ಗಳಿಸಿರುವ ಈ ಪಟ್ಟಿಯಲ್ಲಿ ಖೋಸ್ಲಾ 328ನೇ ರ‍್ಯಾಂಕ್ ಪಡೆದಿದ್ದಾರೆ. ಹೊಸ ಕಂಪೆನಿಗಳಲ್ಲಿ ಹಣ ಹೂಡುವುದರಲ್ಲಿ ಖೋಸ್ಲಾಗೆ ಸಾಟಿ ಇನ್ನೊಬ್ಬರಿಲ್ಲ.



ಪುಣೆಯಲ್ಲಿ ಹುಟ್ಟಿದ ಖೋಸ್ಲಾ (ಬರ್ತ್‌ಡೇ 28-1-1955) ಡೆಲ್ಲಿ ಐಐಟಿಯಲ್ಲಿ ಬಿ.ಟೆ ಮುಗಿಸಿ, ಕಾರ್ನೆಗಿ ಮೆಲನ್ ವಿಶ್ವವಿದ್ಯಾಲಯದಲ್ಲಿ ಎಂ ಟೆಕ್ ಮಾಡಿದವರು. ಸ್ಟಾನ್‌ಫೋರ್ಡ್ ನಲ್ಲಿ ಎಂಬಿಎ ಮುಗಿಸಿದರು. ಖೋಸ್ಲಾರ ತಂದೆ ಭಾರತೀಯ ಸೇನೆಯಲ್ಲಿ ಅಧಿಕಾರಿಯಾಗಿದ್ದವರು. ಅಮೆರಿಕಕ್ಕೆ ಹಾರಿದ ಖೋಸ್ಲಾರ ಮೊದಲ ಸಾಹಸ ಸನ್ ಮೈಕ್ರೋ ಸಿಸ್ಟಮ್ಸ್. 80ರ ದಶಕದಲ್ಲಿ ಈ ಕಂಪೆನಿಯ ಮೊದಲ ಸಿಇಓ ಹಾಗೂ ಚೇರ್‌ಮನ್ ಆದ ಖೋಸ್ಲಾ, ಐಟಿ ಉದ್ಯಮದ ಭವಿಷ್ಯವನ್ನು ಚೆನ್ನಾಗಿಯೇ ಅರಿತಿದ್ದರು. ಆ ಬಳಿಕ ಕ್ಲೀನರ್ ಪರ್ಕಿನ್ಸ್ ಕಾಫೀಲ್ಡ್ ಅಂಡ್ ಬೈರ್ಸ್ ಕಂಪೆನಿಯ ಪಾಲುದಾರ ಹುದ್ದೆ. ಅಲ್ಲೂ ಯಶಸ್ಸು. 2004ರಲ್ಲಿ ಖೋಸ್ಲಾ ವೆಂಚರ್ಸ್ ಎಂಬ ಸ್ವಂತ ಹೂಡಿಕೆ ಸಂಸ್ಥೆ ಆರಂಭಿಸಿದರು. ಅಮೆರಿಕದಲ್ಲಿ ಪ್ರತಿಭಾವಂತ ತಂತ್ರಜ್ಞರು ಈಗ ಹೊಸ ಕಂಪೆನಿಯ ಹೂಡಿಕೆಗಾಗಿ ಮೊತ್ತ ಮೊದಲು ಸಂಪರ್ಕಿಸುವುದೇ ಖೋಸ್ಲಾರನ್ನು ಎನ್ನುವಷ್ಟು ಇವರ ಖ್ಯಾತಿ ಹಬ್ಬಿದೆ.

ನೇರ ಮಾತು, ಖಡಕ್ ಟೀಕೆಗಾಗಿಯೂ ಖೋಸ್ಲಾ ಹೆಸರುವಾಸಿ. ಇತ್ತೀಚೆಗೆ ಅಮೆರಿಕದಲ್ಲಿ ನಡೆದ ವೈದ್ಯಕೀಯ ತಂತ್ರಜ್ಞಾನ ಸಮ್ಮೇಳನವೊಂದರಲ್ಲಿ 'ವೈದ್ಯರ ಅಗತ್ಯವೇ ಇಲ್ಲದ ಕಾಲ ಬರಲಿದೆ. ಈಗ ತಂತ್ರಜ್ಞಾನ ಎಷ್ಟು ಮುಂದುವರಿದಿದೆ ಎಂದರೆ, ಶೇಕಡಾ 80ರಷ್ಟು ವೈದ್ಯರು ಕೆಲಸ ಕಳೆದುಕೊಳ್ಳಲಿದ್ದಾರೆ' ಎಂದು ಈತ ನೀಡಿರುವ ಹೇಳಿಕೆಗೆ ಸಾಮಾಜಿಕ ಜಾಲತಾಣಗಳಲ್ಲಿ ಉಗ್ರಪ್ರತಿಕ್ರಿಯೆ ವ್ಯಕ್ತವಾಗಿದೆ. 'ತಂತ್ರಜ್ಞಾನ ಮುಂದುವರಿದಿದೆ. ವ್ಯಕ್ತಿಯೊಬ್ಬನ ಆರೋಗ್ಯದ ಸಂಪೂರ್ಣ ಡಾಟಾ ಸೆಟ್, ಗಣಕೀಕರಣ ಶಕ್ತಿ ಎರಡೂ ಇದ್ದರೆ, ವೈದ್ಯರು ಹೇಳುವ ಪರಿಹಾರವನ್ನು ಕಂಪ್ಯೂಟರೇ ಸೂಚಿಸುತ್ತದೆ. ಈಗ ಇರುವ ಸಾಧಾರಣ ವೈದ್ಯರಿಗಿಂತ ಕಂಪ್ಯೂಟರ್‌ನ ಪರಿಹಾರವೇ ಹೆಚ್ಚು ನಿಖರ ಮತ್ತು ಅಗ್ಗವೂ ಆಗಿರುತ್ತದೆ' ಎಂದು ಖೋಸ್ಲಾ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಗ್ರೀನ್ ಮತ್ತು ಕ್ಲೀನ್ ಎನರ್ಜಿಯ ಪ್ರತಿಪಾದಕರಾದ ಖೋಸ್ಲಾ 'ಸಿಲಿಕಾನ್ ವ್ಯಾಲಿಯ ಬಹುದೊಡ್ಡ ಭವಿಷ್ಯಕಾರ' ಎಂದೂ ಹೆಸರು ಪಡೆದಿದ್ದಾರೆ.



## ಶಕೀರಾ ಸಂಭ್ರಮ

ಗಾಯಕಿ, ಕವಯತ್ರಿ, ನೃತ್ಯಗಾತಿ, ನಿರ್ಮಾಪಕಿ, ಕೊರಿಯಾಗ್ರಾಫರ್ ಹಾಗೂ ಮಾಡೆಲ್– ಹೀಗೆ ಎಲ್ಲವೂ ಆಗಿರುವ ಶಕೀರಾ ಇನ್ನೀಗ ತಾಯಿಯೂ ಆಗಲಿದ್ದಾಳೆ. 'ಶಕೀರಾ ಗರ್ಭಿಣಿ' ಎಂಬ ಸುದ್ದಿ ಹೊರಬಿದ್ದಿರುವುದು ಪಾಶ್ಚಾತ್ಯ ಸಂಗೀತಲೋಕದಲ್ಲಿ ಸಂಚಲನ ಉಂಟು ಮಾಡಿದೆ. 'ಹೌದು, ನನ್ನ ಮೊದಲ ಮಗುವಿಗೆ ತಾಯಿ ಆಗುತ್ತಿದ್ದೇನೆ. ನನ್ನ ಸಂಭ್ರಮವನ್ನು ವರ್ಣಿಸಲು ಆಗುತ್ತಿಲ್ಲ. ಇನ್ನು ವೃತ್ತಿಪರ ಎಲ್ಲ ಕೆಲಸಗಳಿಗೂ, ಸಮಾರಂಭಗಳಿಗೂ ಸ್ವಲ್ಪ ಬ್ರೇಕ್ ಹಾಕುತ್ತಿದ್ದೇನೆ' ಎಂದು ಸ್ವತಃ ಹೇಳಿಕೊಂಡಿದ್ದಾಳೆ ಶಕೀರಾ. (ಬರ್ತ್‌ಡೇ 2-2-1977) 'ಹಿಪ್ಸ್ ಡೋಂಟ್ ಲೈ' ಎನ್ನುವ ಈಕೆಯ ಪ್ರಖ್ಯಾತ ಹಾಡಿನಂತೆಯೇ, ಈಕೆಯ ಬಾಯ್‌ಫ್ರೆಂಡ್ ಜತೆಗಿನ ನಡವಳಿಕೆಯೂ ವಿಶ್ವಖ್ಯಾತಿ ಹೊಂದಿದೆ. ಸ್ಪೇನ್‌ನ ಫುಟ್‌ಬಾಲ್ ಸೂಪರ್‌ಸ್ಟಾರ್ ಜೆರಾರ್ಡ್ ಪಿಕ್ ಜತೆಗಿನ ಈಕೆಯ ಗೆಳೆತನ ಒಂದು ವರ್ಷವಷ್ಟೇ ಹಳೆಯದ್ದು. ಸದ್ಯಕ್ಕೆ ಇಬ್ಬರೂ ತಮ್ಮ ವೃತ್ತಿಪರ ತಿರುಗಾಟಕ್ಕೆ ಅಲ್ಪವಿರಾಮ ನೀಡಿ ಮಗು ಬರುವ ಸಂಭ್ರಮವನ್ನು ಆಚರಿಸಲಿದ್ದಾರಂತೆ.

ಸೆಪ್ಟೆಂಬರ್ ಮೊದಲ ವಾರದಲ್ಲಿ ಶಕೀರಾ ತನ್ನ ತಂದೆಯ ಜತೆಗೆ ಹಾಡಿದ ಹಾಡಿನ ವೀಡಿಯೊ ಒಂದು ಬಿಡುಗಡೆಯಾಗಿತ್ತು. 'ಲವ್ ಇನ್ ದಿ ಟೈಮ್ಸ್ ಆಫ್ ಕಾಲರಾ' ಎಂಬ ಸಿನಿಮಾದ ಹಾಡದು. 81ರ ಹರೆಯದ ತಂದೆಯ ಹುಟ್ಟುಹಬ್ಬದಂದೇ ಈ ಆಲ್ಬಂಅನ್ನು ಆಕೆ ತಂದೆಗೆ ಕಾಣಿಕೆಯಾಗಿ ಪ್ರಕಟಿಸಿದ್ದಳು. ಸ್ವತಃ ಹಾಡುಗಳನ್ನು ಬರೆಯುವ ಈಕೆಯ ಮೇಲೆ ಲ್ಯಾಟಿನ್ ಮತ್ತು ಅರೆಬಿಕ್ ಪ್ರಭಾವ ಹೆಚ್ಚು. ಈಕೆಯ ಬೆಲ್ಲಿ ಡ್ಯಾನ್ಸ್ ನೋಡಲು ಅಮೆರಿಕ, ಯೂರೋಪ್ ಮತ್ತು ದುಬೈಗಳಲ್ಲೂ ಜನ ಮುಗಿಬೀಳುತ್ತಾರೆ. ಸ್ಪಾನಿಶ್, ಇಂಗ್ಲಿಷ್ ಮತ್ತು ಪೋರ್ಚುಗೀಸ್ ಭಾಷೆಗಳಲ್ಲಿ ಅತ್ಯಂತ ಚೆನ್ನಾಗಿ ಬರೆಯುವ, ಇಟಾಲಿಯನ್ ಮತ್ತು ಅರೆಬಿಕ್‌ಅನ್ನು ಚೆನ್ನಾಗಿ ಮಾತನಾಡುವ ಈ 'ವಕಾ ವಕಾ' (ಇದು 2010ರ ವಿಶ್ವಕಪ್ ಫುಟ್‌ಬಾಲ್‌ನ ಧ್ಯೇಯಗೀತೆ) ಗೀತೆಯ ಹುಡುಗಿ ತಡವಾಗಿಯಾದರೂ ತಾಯಿ ಆಗಿರುವುದು ಕುಟುಂಬದ ಸದಸ್ಯರಿಗೆಲ್ಲ ಸಂತೋಷ ತಂದಿದೆಯಂತೆ. ಅಭಿಮಾನಿಗಳ ದುಃಖ ವರ್ಣಿಸಲಾಗದು ಎನ್ನುವುದೂ ನಿಜ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65